**ಸಾಕ್ಷಿಯನ್ನು ದಿಃ 14.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ಮತ್ತು 4ನೇ ಪ್ರತಿವಾದಿಯರ ವಾರಸುದಾರರು, 6 ಮತ್ತು 7ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಡಿ ಕೆ ಎಮ್ ರವರಿಂದಃ**

1) ಈ ದಾವೆಯನ್ನು ಯಾವ ಸ್ವತ್ತಿನ ಮೇಲೆ ಹೂಡಿದ್ದೇನೆ, ಅದರ ವಿಸ್ತೀರ್ಣ ಗೊತ್ತಿಲ್ಲ. ದಾವಾ ಸ್ವತ್ತುಗಳು 5ನೇ ಪ್ರತಿವಾದಿ ಸ್ವಾಮಿ ರವರ ಹೆಸರಿನಲ್ಲಿದೆ. 5ನೇ ಪ್ರತಿವಾದಿ ಮತ್ತು ನಾನು ಚೆನ್ನಾಗಿದ್ದೇವೆ ಎಂದರೆ ಸರಿ. ಈ ದಾವೆಯನ್ನು 5ನೇ ಪ್ರತಿವಾದಿಯೇ ಹೂಡುವಂತೆ ಹೇಳಿದ್ದರು ಎಂದರೆ ಸರಿ. 5ನೇ ಪ್ರತಿವಾದಿಯೇ ದಾವೆ ಹೂಡಲು ದಾಖಲೆಗಳನ್ನು ತೆಗೆದುಕೊಟ್ಟಿರುತ್ತಾರೆ ಎಂದರೆ ಸರಿ. 5ನೇ ಪ್ರತಿವಾದಿಯ ವಿರುದ್ಧ 6 ಮತ್ತು 7ನೇ ಪ್ರತಿವಾದಿಯರು ವಿಭಾಗಕ್ಕಾಗಿ ಅಸಲು ದಾವೆ ಸಂಖ್ಯೆ 408/2003 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಅಸಲು ದಾವೆಯಲ್ಲಿ ಪ್ರೇಮ ಮತ್ತು ಅವರ ಮಕ್ಕಳಾದ 6 ಮತ್ತು 7ನೇ ಪ್ರತಿವಾದಿಯರಿಗೆ 5ನೇ ಪ್ರತಿವಾದಿಯ ಸ್ವತ್ತಿನಲ್ಲಿ 1/3 ಭಾಗದಷ್ಟು ಸ್ವತ್ತನ್ನು ನೀಡಬೇಕಾಗಿರುವ ಬಗ್ಗೆ ಆದೇಶ ಆಗಿರುವ ಬಗ್ಗೆ ಗೊತ್ತಿಲ್ಲ.

2) ಹೊನ್ನೇಗೌಡ ಮೃತಪಟ್ಟು ಎಷ್ಟು ವರ್ಷ ಆಗಿದೆ ಎಂದು ಗೊತ್ತಿಲ್ಲ. ನಾನು ಹೊನ್ನೇಗೌಡರವರೊಂದಿಗೆ ಮದುವೆಯಾದ ಫೋಟೋ ಮತ್ತು ಲಗ್ನಪತ್ರಿಕೆ ಮನೆಯಲ್ಲಿದೆ. ನನ್ನ ಮದುವೆ ಕಾಲಕ್ಕೆ ಸಾವಿತ್ರಮ್ಮ ಜೀವಂತ ಇರಲಿಲ್ಲ. ಸಾವಿತ್ರಮ್ಮ ರವರು 20 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ರಿಂದ 5ನೇ ಪ್ರತಿವಾದಿಯರು ದಾವ ಸ್ವತ್ತುಗಳನ್ನು 1994 ರಲ್ಲಿ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಿಭಾಗದಂತೆ ಪಾಲುಪಟ್ಟಿ ಸಹ ಆಗಿದೆ ಎಂದರೆ ಸರಿ. ಪಾಲುಪಟ್ಟಿ ಆದ ನಂತರ ಅವರ ಹೆಸರಿಗೆ ಖಾತೆ ಬದಲಾವಣೆ

ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಅದು ನಮೂದಾಗಿದೆ ಎಂದರೆ ಸರಿ.

3) 1 ರಿಂದ 5ನೇ ಪ್ರತಿವಾದಿಯರು 1994 ರಲ್ಲಿಯೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿದ್ದರು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. 6 ಮತ್ತು 7ನೇ ಪ್ರತಿವಾದಿಯರು ಹೂಡಿದ್ದ ದಾವೆಯಲ್ಲಿ ಎಫ್ ಡಿ ಪಿ ಹೂಡಿದ್ದು ಸದರಿ ಅರ್ಜಿಯು ಸಹ ಮುಕ್ತಾಯಗೊಂಡಿದೆ ಎಂದರೆ ಸರಿ. ಅದರಂತೆ 6 ,7ನೇ ಪ್ರತಿವಾದಿ ಹಾಗೂ ಪ್ರೇಮ ರವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಪ್ರೇಮ ರವರು 5ನೇ ಪ್ರತಿವಾದಿಯ ವಿರುದ್ಧ ಜೀವನಾಂಶದ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳೆಲ್ಲವೂ ದಿಃ 24.04.1987 ರಂದು 1 ರಿಂದ 5ನೇ ಪ್ರತಿವಾದಿಯರು ಖರೀದಿಸಿದ ಸ್ವತ್ತಾಗಿದೆ ಎಂದರೆ ಗೊತ್ತಿಲ್ಲ. ಹೊನ್ನೇಗೌಡರವರಿಗೆ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ.

4) ನಾನು ಹೊನ್ನೇಗೌಡರವರನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿ 6 ಮತ್ತು 7ನೇ ಪ್ರತಿವಾದಿಯರ ಸ್ವತ್ತುಗಳನ್ನು ಹೊಡೆದುಕೊಳ್ಳಲು ಈ ದಾವೆಯನ್ನು ಹೂಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಲ್ಲ ಮತ್ತು ನಾನು ಒಟ್ಟು ಕುಟುಂಬದ ಸದಸ್ಯೆ ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-11 ರಲ್ಲಿ ಖರೀದಿಸಿದ ಸ್ವತ್ತು ಇದೆ ಎಂದರೆ ಸಾಕ್ಷಿ ಮೌನವಾಗಿ ನಿಲ್ಲುತ್ತಾರೆ. 6 ಮತ್ತು 7ನೇ ಪ್ರತಿವಾದಿಯರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 453/2017 ರಂತೆ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಈ ದಾವೆಯು ವಿಚಾರಣೆಯಲ್ಲಿರುವುದರಿಂದ ಸದರಿ ದಾವೆ ವಜಾಗೊಂಡಿದೆ ಎಂದರೆ ಸಾಕ್ಷಿ ಮೌನವಾಗಿ ನಿಲ್ಲುತ್ತಾರೆ. ನಾನು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಆಧಾರ್ ಕಾರ್ಡ್ , ಪಡಿತರ ಚೀಟಿ ಹಾಗೂ ಮತದಾರರ ಚೀಟಿ ಇದ್ದು

ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. 6 ಮತ್ತು 7ನೇ ಪ್ರತಿವಾದಿಯರಿಗೆ ತೊಂದರೆ ನೀಡಲು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**